# 0102

**First Semester Three Years LL.B. Examination, January 2012**
**INDIAN CONSTITUTIONAL LAW (Course – II)**

Time : 3 Hours | Max. Marks : 100

**Instructions :** 1. Answer **all five** questions.

2. **One** essay type and one short note question or problem from **each** Unit have to be attempted, which is referred as part **(a)** and **(b)** in **all** the Units.

3. Figures to the **right** indicate marks.

4. Answers should be written either in **English** or in **Kannada completely**.

**UNIT – I**

Q.No. 1. (a) With reference to decided cases explain the scope of the fundamental right to freedom of religion under the Indian Constitution. Marks : 15

ನಿರ್ಣಯಿಸಲ್ಪಟ್ಟ ಪ್ರಕರಣಗಳನ್ನು ಉಲ್ಲೇಖಿಸಿ ಭಾರತದ ಸಂವಿಧಾನದಲ್ಲಿನ ಧಾರ್ಮಿಕ ಸ್ವಾತಂತ್ರ್ಯದ ಮೂಲಭೂತ ಹಕ್ಕಿನ ವ್ಯಾಪ್ತಿಯನ್ನು ವಿವರಿಸಿರಿ.

OR/**ಅಥವಾ**

Discuss the scope of right to life and personal liberty under the Constitution.

ಸಂವಿಧಾನದಲ್ಲಿರುವ ಜೀವ ಮತ್ತು ವೈಯಕ್ತಿಕ ಸ್ವಾತಂತ್ರ್ಯದ ಹಕ್ಕಿನ ವ್ಯಾಪ್ತಿಯನ್ನು ಚರ್ಚಿಸಿರಿ.

(b) Write a note on the nature of the Indian Constitution. Marks : 05

ಭಾರತದ ಸಂವಿಧಾನದ ಸ್ವರೂಪವನ್ನು ಕುರಿತು ಟಿಪ್ಪಣಿಯೊಂದನ್ನು ಬರೆಯಿರಿ.

OR/**ಅಥವಾ**

Can company or corporation be a citizen ?

ಒಂದು ಕಂಪನಿ ಅಥವಾ ಒಂದು ನಿಗಮವು ಒಬ್ಬ ಪ್ರಜೆ (ನಾಗರೀಕ) ಎಂದು ಪರಿಗಣಿಸಲ್ಪಡಬಹುದೆ ?

## UNIT – II

Q.No. 2. (a) In the light of decided cases explain the importance of the Directive principles of State Policy under the Indian Constitution. Marks : 15

ತೀರ್ಮಾನಿತ ಪ್ರಕರಣಗಳ ಹಿನ್ನೆಲೆಯಲ್ಲಿ ರಾಜ್ಯ ನೀತಿ ನಿರ್ದೇಶಕ ತತ್ವಗಳನ್ನು ಭಾರತ ಸಂವಿಧಾನದಲ್ಲಿ ಅಳವಡಿಸಿರುವುದರ ಮಹತ್ವವನ್ನು ವಿವರಿಸಿ.

OR/**ಅಥವಾ**

Examine the Constitutional position of Governor of a State.

ರಾಜ್ಯವೊಂದರ ರಾಜ್ಯಪಾಲರ ಸಂವಿಧಾನಿಕ ಸ್ಥಾನಮಾನವನ್ನು ವಿವರಿಸಿ.

(b) The President of India dissolved the Lok Sabha but the Prime Minister was continued in his office. The continuance of the Prime Minister along with his ministry even after dissolution by Lok Sabha was challanged in the Supreme Court by 'x', a citizen of India on the ground that Prime Minister ceases to be a member of Parliament. Decide. Marks : 05

ಭಾರತದ ರಾಷ್ಟ್ರಪತಿಯು ಲೋಕಸಭೆಯನ್ನು ವಿಸರ್ಜಿಸುತ್ತಾನೆ. ಲೋಕಸಭೆ ವಿಸರ್ಜಿಸಿದರೂ ಪ್ರಧಾನಮಂತ್ರಿಯು ತನ್ನ ಮಂತ್ರಿಮಂಡಳದೊಂದಿಗೆ ಆ ಹುದ್ದೆಯಲ್ಲಿಯೇ ಮುಂದುವರಿಯುತ್ತಾನೆ. ಸಂಸತ್ತಿನ ವಿಸರ್ಜನೆಯಿಂದ ಸದಸ್ಯತ್ವವನ್ನು ಕಳೆದುಕೊಂಡಿರುವ ಪ್ರಧಾನಮಂತ್ರಿ ಮತ್ತು ಆತನ ಮಂತ್ರಿಮಂಡಳದ ಸದಸ್ಯರು ಅಧಿಕಾರದಲ್ಲಿ ಮುಂದುವರಿಯಲು ಅರ್ಹತೆಯನ್ನು ಹೊಂದಿಲ್ಲ ಎಂದು 'x' ಎಂಬ ಭಾರತೀಯ ನಾಗರೀಕನು ಸರ್ವೋಚ್ಛನ್ಯಾಯಾಲಯದಲ್ಲಿ ಪ್ರಶ್ನಿಸುತ್ತಾನೆ. ನಿರ್ಧರಿಸಿ.

OR/**ಅಥವಾ**

A person is arrested under a warrant issued by the speaker of the Legislative Assembly of a State for being produced before the assembly for answering and alleged breach of privilege. The privilege alleged to have been broken is not mentioned. His wife files a writ of Habeas Corpus in the High Court to secure his release. Decide.

ರಾಜ್ಯವೊಂದರ ವಿಧಾನಸಭೆಯ ಅಧ್ಯಕ್ಷರ ಆಜ್ಞಾಪತ್ರದ ಪ್ರಕಾರ ಒಬ್ಬ ವ್ಯಕ್ತಿಯನ್ನು, ವಿಧಾನಸಭೆಯ ವಿಶೇಷಾಧಿಕಾರಗಳ ಉಲ್ಲಂಘನೆ ಮಾಡಿದ್ದಕ್ಕಾಗಿ ಆ ಸಭೆಯ ಮುಂದೆ ಸಾದರ ಪಡಿಸುವ ಸಲುವಾಗಿ ಬಂಧಿಸಲಾಯಿತು. ಉಲ್ಲಂಘಿಸಲ್ಪಟ್ಟಿದೆ ಎಂದು ಹೇಳಲಾದ ವಿಶೇಷಾಧಿಕಾರವು ಏನೆಂಬುದನ್ನು ಆಜ್ಞಾಪತ್ರದಲ್ಲಿ ತಿಳಿಸಿಲ್ಲ. ಅವನ ಪತ್ನಿಯು ಉಚ್ಚ ನ್ಯಾಯಾಲಯದಲ್ಲಿ ''ಬಂಧಿತನ ಹಾಜರಾತಿ'' ಗೆ ಪರಮಾದೇಶ ಹೊರಡಿಸಲು ಕೋರಿ ಅರ್ಜಿ ಸಲ್ಲಿಸುವಳು. ನಿರ್ಧರಿಸಿ.

## UNIT – III

Q.No. 3. (a) In the light of decided cases, examine the provisions relating to transfer of judges from one Highcourt to another. State whether such transfers affect the independence of judiciary. Marks : 15

ತೀರ್ಮಾನಿತ ಪ್ರಕರಣಗಳ ಹಿನ್ನೆಲೆಯಲ್ಲಿ, ಉಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ಒಂದು ಉಚ್ಚ ನ್ಯಾಯಾಲಯದಿಂದ ಇನ್ನೊಂದು ಉಚ್ಚ ನ್ಯಾಯಾಲಯಕ್ಕೆ ವರ್ಗಾವಣೆ ಮಾಡುವುದರ ಕುರಿತು ಇರುವ ಕಾನೂನನ್ನು ಪರಿಶೀಲಿಸಿ. ಈ ತರಹದ ವರ್ಗಾವಣೆಗಳು ನ್ಯಾಯಾಂಗದ ಸ್ವಾತಂತ್ರ್ಯಕ್ಕೆ ಧಕ್ಕೆ ತರಬಹುದೇ ? ತಿಳಿಸಿ

OR/**ಅಥವಾ**

Explain the scope of original and advisory jurisdictions of the Supreme Court of India.

ಭಾರತದ ಸರ್ವೋಚ್ಚ ನ್ಯಾಯಾಲಯದ ಮೂಲ ಅಧಿಕಾರ ಮತ್ತು ಸಲಹಾ ಅಧಿಕಾರದ ವ್ಯಾಪ್ತಿಯನ್ನು ವಿವರಿಸಿರಿ.

(b) Write a note on Tenure and Removal of Supreme Court Judges. Marks : 05

ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ಅವಧಿ ಮತ್ತು ತೆಗೆದುಹಾಕುವಿಕೆ ಕುರಿತು ಟಿಪ್ಪಣಿಯೊಂದನ್ನು ಬರೆಯಿರಿ.

OR/**ಅಥವಾ**

Write a note on Writ of prohibition.

'ಪ್ರತಿಬಂಧ ಪತ್ರ' ಆದೇಶ ಕುರಿತು ಟಿಪ್ಪಣಿಯೊಂದನ್ನು ಬರೆಯಿರಿ.

## UNIT – IV

Q.No. 4. (a) Discuss the constitutional scheme of distribution of legislative powers between the Centre and the States. Marks : 15

ಭಾರತದ ಸಂವಿಧಾನದಲ್ಲಿನ ಕೇಂದ್ರ ಮತ್ತು ರಾಜ್ಯಗಳ ನಡುವಿನ ಶಾಸನಾಧಿಕಾರದ ಹಂಚಿಕೆಯ ಯೋಜನೆಯನ್ನು ಚರ್ಚಿಸಿರಿ.

OR/**ಅಥವಾ**

Discuss the powers of the Parliament to amend the Constitution in the light of Judicial decisions.

ಸಂವಿಧಾನವನ್ನು ತಿದ್ದುಪಡಿಮಾಡುವ ಸಂಸತ್ತಿನ ಅಧಿಕಾರ ವ್ಯಾಪ್ತಿಯನ್ನು ನ್ಯಾಯಾಂಗದ ತೀರ್ಮಾನಿತ ಪ್ರಕರಣಗಳೊಂದಿಗೆ ಚರ್ಚಿಸಿರಿ.

(b) The legislature of a State in India passes an Act prescribing a lower rate of sales tax on cotton goods manufactured within that State than on goods imported from other States. A trader in cotton goods challenges the validity of the Act on the ground of violation of freedom of Inter-State trade and commerce. Decide. Marks : 05

ಭಾರತದಲ್ಲಿನ ರಾಜ್ಯವೊಂದರ ಶಾಸನಸಭೆಯು ಕಾನೂನೊಂದರ ಮೂಲಕ ಅದೇ ರಾಜ್ಯದಲ್ಲಿ ತಯಾರಾಗುವ ಹತ್ತಿಯ ವಸ್ತುಗಳ ಮೇಲೆ ವಿಧಿಸಿರುವ ಮಾರಾಟ ತೆರಿಗೆಯು, ಬೇರೆ ರಾಜ್ಯಗಳಿಂದ ಆಮದುಮಾಡಿಕೊಳ್ಳಲ್ಪಡುವ ಹತ್ತಿಯ ವಸ್ತುಗಳ ಮೇಲೆ ವಿಧಿಸಿರುವ ಮಾರಾಟ ತೆರಿಗೆಗಿಂತ ಕಡಿಮೆಯಾಗಿದೆ. ಅಂದರೆ ಬೇರೆ ರಾಜ್ಯಗಳಿಂದ ಆಮದುಮಾಡಿಕೊಳ್ಳುವ ಹತ್ತಿಯ ವಸ್ತುಗಳಿಗೆ ಹೆಚ್ಚಿನ ಮಾರಾಟ ತೆರಿಗೆಯನ್ನು ವಿಧಿಸಿದೆ. ಈ ಕಾನೂನಿನ ಸಿಂಧುತ್ವವನ್ನು ಒಬ್ಬ ವ್ಯಾಪಾರಿಯು ತನಗೆ ಸಂವಿಧಾನದ ಅಂತರರಾಜ್ಯ ವ್ಯಾಪಾರ, ವಾಣಿಜ್ಯ ಹಾಗೂ ವ್ಯವಹರಣೆಯ ಹಕ್ಕನ್ನು ಮೊಟಕುಗೊಳಿಸಲಾಗಿದೆ ಎಂದು ಪ್ರಶ್ನಿಸಿದ್ದಾನೆ. ನಿರ್ಧರಿಸಿ.

OR/**ಅಥವಾ**

The Government of India levies an import duty on goods imported by a State for Governnmental use. This is challenged by the State on the ground that the property of the State is immune from Central Taxation. Decide.

ಸರಕಾರೀ ಉಪಯೋಗಕ್ಕಾಗಿ ರಾಜ್ಯವು ಆಯಾತ ಮಾಡಿದ ಸರಕುಗಳ ಮೇಲೆ ಭಾರತ ಸರಕಾರವು ಆಯಾತ ಕರವನ್ನು(import duty) ವಿಧಿಸುವುದು. ರಾಜ್ಯದ ಸಂಪತ್ತು (ಆಸ್ತಿ) ಕೇಂದ್ರದ ಕರಾಕರಣೆಯಿಂದ ವಿಮುಕ್ತವಾಗಿದೆಯೆಂಬ ಆಧಾರದ ಮೇಲೆ ಆ ರಾಜ್ಯವು ತನ್ನ ಮೇಲೆ ವಿಧಿಸಿರುವ ಕರಾಕರಣೆಯನ್ನು ಪ್ರಶ್ನಿಸುವುದು. ನಿರ್ಧರಿಸಿ.

## UNIT – V

Q.No. 5. (a) Explain the safeguards guaranteed to civil servants under the Indian Constitution. Are they available to temporary civil servants also ? Marks : 15

ಭಾರತದ ಸಂವಿಧಾನದ ಪ್ರಕಾರ ಸರ್ಕಾರಿ ನೌಕರರಿಗೆ ಕೊಟ್ಟಿರುವ ರಕ್ಷಣೆಗಳನ್ನು ವಿವರಿಸಿರಿ. ಈ ರಕ್ಷಣೆಗಳು ತಾತ್ಕಾಲಿಕ ಸೇವಕರಿಗೂ ಸಹ ಲಭ್ಯವಿರುವವೇ ?

OR/**ಅಥವಾ**

Examine the powers of the President of India to declare a State emergency and state its effect on Fedaralism and Fundamental Rights.

ರಾಜ್ಯ ಒಂದರಲ್ಲಿ ತುರ್ತು ಪರಿಸ್ಥಿತಿಯನ್ನು ಘೋಷಿಸಲು ಭಾರತದ ರಾಷ್ಟ್ರಪತಿಗೆ ಇರಬಹುದಾದ ಅಧಿಕಾರದ ವ್ಯಾಪ್ತಿಯನ್ನು ಮತ್ತು ಇದರಿಂದ ಸಂಯುಕ್ತಾತ್ಮಕ ವ್ಯವಸ್ಥೆ ಮತ್ತು ಮೂಲಭೂತ ಹಕ್ಕುಗಳ ಮೇಲಾಗುವ ಪರಿಣಾಮಗಳನ್ನು ವಿಮರ್ಶಿಸಿ.

(b) The property of a citizen of India seized by the police authorities of a State, on suspicion of being stolen property, is lost while in police custody.The owner claims damages from the State for the loss of his property and is rejected. What remedies are available to the owner against the State ? Marks : 05

ಭಾರತದ ನಾಗರೀಕನೊಬ್ಬನ ಆಸ್ತಿಯನ್ನು ಪೊಲೀಸ್ ಸಿಬ್ಬಂದಿಯವರು ಅಪಹರಿಸಿದ ಆಸ್ತಿಯೆಂದು ಸಂಶಯಾಸ್ಪದ ಕಾರಣದ ಮೇಲೆ ವಶಪಡಿಸಿಕೊಂಡಾಗ, ಆಸ್ತಿಯು ಪೊಲೀಸರ ಅಧೀನದಲ್ಲಿದ್ದಾಗ ಕಳೆದುಹೋಯಿತು. ಆಸ್ತಿಯ ಮಾಲೀಕನು ಸರಕಾರದ ವಿರುದ್ಧ ನಷ್ಟ ಪರಿಹಾರಕ್ಕೆ ಸಲ್ಲಿಸಿದ ಮನವಿಯು ತಿರಸ್ಕರಿಸಲ್ಪಟ್ಟಿತು. ಈ ಬಗ್ಗೆ ಸರಕಾರದ ವಿರುದ್ಧ ಇರಬಹುದಾದ ಪರಿಹಾರ ಮಾರ್ಗಗಳು ಯಾವುವು ?

OR/**ಅಥವಾ**

The President of India issues a proclamation of emergency under Art. 352 of the Constitution to be operative only in a border State. Decide its constitutional validity.

ಭಾರತದ ರಾಷ್ಟ್ರಪತಿಯು ಗಡಿರಾಜ್ಯವೊಂದರಲ್ಲಿ ಮಾತ್ರ ಕಾರ್ಯಗತವಾಗುವಂತೆ ತುರ್ತು ಪರಿಸ್ಥಿತಿಯ ಘೋಷಣೆಯನ್ನು ಸಂವಿಧಾನದ ಅನುಚ್ಛೇದ352 ರ ಪ್ರಕಾರ ಹೊರಡಿಸುತ್ತಾನೆ. ಅದರ ಸಂವಿಧಾನಾತ್ಮಕ ಬದ್ಧತೆಯನ್ನು ನಿರ್ಧರಿಸಿ.